# ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
# KARNATAKA LEGISLATIVE ASSEMBLY, RESEARCH AND REFERENCE BRANCH

## ಪತ್ರಿಕಾ ತುಣುಕುಗಳು
## PAPER CLIPPINGS

8

ಇಲಾಖೆ / ವಿಷಯ : DEPARTMENT / SUBJECT: ಇತರೆ ರಾಜ್ಯಗಳ ಮಾಹಿತಿ

ಪತ್ರಿಕೆಯ ಹೆಸರು : NAME OF THE NEWS PAPER: ಕನ್ನಡ ಪ್ರಭ    ದಿನಾಂಕ : DATE : 12/2/2021

# ಬಿಟ್‌ಕಾಯಿನ್ ನಂಥ ಕರೆನ್ಸಿ ಬಳಸಿದರೆ ಜೈಲು, ದಂಡ

## ಈ ಅಧಿವೇಶನದಲ್ಲೇ ಕಾಯ್ದೆ ಮಂಡನೆ ಸಾಧ್ಯತೆ
## ಕಂಪನಿಗಳು, ಜನರು ಈ ಕರೆನ್ಸಿ ಹೊಂದಿದ್ದರೆ ಶಿಕ್ಷೆ

ಮುಂಬೈ: ಜನಪ್ರಿಯವಾಗಿರುವ ಬಿಟ್‌ಕಾಯಿನ್‌ನಂತಹ ಖಾಸಗಿ ಕ್ರಿಪ್ಟೋಕರೆನ್ಸಿಗಳ ದರ ಸಾರ್ವಕಾಲಿಕ ಗರಿಷ್ಠಕ್ಕೆ ತಲುಪಿರುವಾಗಲೇ, ಇಂಥ ಡಿಜಿಟಲ್ ಕರೆನ್ಸಿ ಬಳಸಿದರೆ ಭಾರೀ ದಂಡ ವಿಧಿಸುವ ಕಾನೂನು ಜಾರಿಗೆ ಕೇಂದ್ರ ಸರ್ಕಾರ ಮುಂದಾಗಿದೆ. ಸರ್ಕಾರದ ಈ ಕ್ರಮವು ಸ್ವತಃ ಆರ್‌ಬಿಐನ ಪ್ರಸ್ತಾಪಿತ ಡಿಜಿಟಲ್ ಕರೆನ್ಸಿ ಬಿಡುಗಡೆಗೆ ವೇದಿಕೆ ಸಜ್ಜು ಮಾಡುವ ಯತ್ನ ಎನ್ನಲಾಗಿದೆ. ಹೀಗಾಗಿಯೇ ದೀರ್ಘಕಾಲೀನ ಪರಿಣಾಮ ಹೊಂದಿರುವ ಮಸೂದೆಯನ್ನು ಸಂಸತ್ತಿನ ಇದೇ ಬಜೆಟ್ ಅಧಿವೇಶನದಲ್ಲೇ ಮಂಡಿಸಲು ಸರ್ಕಾರ ನಿರ್ಧರಿಸಿದೆ ಎಂದು ಮೂಲಗಳು ತಿಳಿಸಿವೆ.



» 14

### ಆರ್‌ಬಿಐನಿಂದ ಕ್ರಿಪ್ಟೋಕರೆನ್ಸಿ?

ಸರ್ಕಾರ ಈ ಕ್ರಮ ಕೈಗೊಳ್ಳುತ್ತಿರುವುದು ಶೀಘ್ರವೇ ಭಾರತದಲ್ಲಿ ಆರ್‌ಬಿಐ ಮೂಲಕ ಅಧಿಕೃತವಾಗಿ ಡಿಜಿಟಲ್ ಕರೆನ್ಸಿ ಬಿಡುಗಡೆ ಮಾಡುವುದಕ್ಕೆ ಎಂದು ಹೇಳಲಾಗುತ್ತಿದೆ. ಖಾಸಗಿ ಡಿಜಿಟಲ್ ಕರೆನ್ಸಿ ನಿಷೇಧಿಸಿ, ಸರ್ಕಾರಿ ಡಿಜಿಟಲ್ ಕರೆನ್ಸಿ ತರಲು ಸರ್ಕಾರ ಈ ಮಸೂದೆ ರೂಪಿಸಿದೆ ಎನ್ನಲಾಗಿದೆ.

**₹7300 ಕೋಟಿ**

ಭಾರತದಲ್ಲಿ ಜನರ ಬಳಿ ಸದ್ಯ ಇಷ್ಟು ಮೊತ್ತದ ಖಾಸಗಿ ಡಿಜಿಟಲ್ ಕರೆನ್ಸಿ ಇದೆ!

# ಬಿಟ್‌ಕಾಯಿನ್ ರೀತಿ ಕರೆನ್ಸಿ ಬಳಕೆಗೆ ಜೈಲು

1 ಮೊದಲ ಪುಟದಿಂದ

ಸರ್ಕಾರ ಸಿದ್ಧಪಡಿಸಿರುವ ಕರಡು ಮಸೂದೆ ಅನ್ವಯ, ಯಾವುದೇ ವ್ಯಕ್ತಿ, ಸಂಸ್ಥೆ, ಹಣ ವರ್ಗಾವಣೆ ಸಂಸ್ಥೆಗಳು, ವ್ಯಾಪಾರಿಗಳು ಡಿಜಿಟಲ್ ಕರೆನ್ಸಿ ಬಳಕೆ ಮಾಡುವುದು ಅಪರಾಧ ಎನ್ನಿಸಿಕೊಳ್ಳಲಿದೆ. ಕೇಂದ್ರ ಸರ್ಕಾರ ನೇಮಿಸಿದ್ದ ಆಯೋಗವೊಂದು 2019ರಲ್ಲಿ ನೀಡಿದ ತನ್ನ ವರದಿಯಲ್ಲಿ ಖಾಸಗಿ ಡಿಜಿಟಲ್ ಕರೆನ್ಸಿ ಬಳಸುವವರಿಗೆ 10 ವರ್ಷ ಜೈಲು ಶಿಕ್ಷೆ ಹಾಗೂ ದಂಡ ವಿಧಿಸಬೇಕು. ಅಲ್ಲದೆ ಬ್ಯಾಂಕ್ ನೋಟ್ ರೀತಿ ಕಾರ್ಯನಿರ್ವಹಿಸುವ ಅಧಿಕೃತ ಡಿಜಿಟಲ್ ಕರೆನ್ಸಿಯನ್ನು ರಿಸರ್ವ್ ಬ್ಯಾಂಕ್ ಮೂಲಕವೇ ಬಿಡುಗಡೆ ಮಾಡಬೇಕು ಎಂದು ಸಲಹೆ ಮಾಡಿತ್ತು. ಬಿಟ್‌ಕಾಯಿನ್‌ನಂತಹ ಖಾಸಗಿ ಡಿಜಿಟಲ್ ಕರೆನ್ಸಿಗಳು ಗ್ರಾಹಕರ ದತ್ತಾಂಶವನ್ನು ದುರ್ಬಳಕೆ ಮಾಡಿಕೊಳ್ಳುತ್ತಿವೆ ಹಾಗೂ ಅವುಗಳಿಂದ ಹಣಕಾಸು ವ್ಯವಸ್ಥೆಗೆ ಅಪಾಯವಿದೆ ಎಂಬ ಆರೋಪವಿದೆ. ಜೊತೆಗೆ ಇಂಥ ಹಣ ಸಂಗ್ರಹದ ಮೇಲೆ ಆರ್‌ಬಿಐಗೆ ಯಾವುದೇ ಹಿಡಿತ ಇಲ್ಲ. ಕಪ್ಪುಹಣ ಇಡಲು ಇವು ದೊಡ್ಡ ಮಾರ್ಗ. ಒಂದು ದೇಶದಿಂದ ಇನ್ನೊಂದು ದೇಶಕ್ಕೆ ಯಾವುದೇ ಅಡೆತಡೆ ಇಲ್ಲದೇ ಹಣ ವರ್ಗಾವಣೆ ಸಾಧ್ಯ. ಹೀಗಾಗಿ ಖಾಸಗಿ ಡಿಜಿಟಲ್ ಕರೆನ್ಸಿ ನಿಷೇಧಕ್ಕೆ ಸರ್ಕಾರ ಮುಂದಾಗಿದೆ. ಭಾರತದಲ್ಲಿ 70 ಲಕ್ಷ ಜನ 100 ಕೋಟಿ ಡಾಲರ್‌ನಷ್ಟು ಕ್ರಿಪ್ಟೋ ಕರೆನ್ಸಿ ಹೊಂದಿದ್ದಾರೆ.